ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಇಪ್ಪತ್ತು ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸಲಾಗುವ ಇಪ್ಪತ್ತನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹುಕ್ಕೇರಿ ತಾಲ್ಲೂಕಿನಲ್ಲಿ ಕೆರೆಗಳ ನಿರ್ಮಾಣ.

೧೨೦೮. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ, ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦ರ ನಂತರ ಹುಕ್ಕೇರಿ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ನಿರ್ಮಿಸಲು ಆಯವ್ಯಯದಲ್ಲಿ ಅಳವಡಿಸಲಾಗಿದೆ ಹಾಗೂ ಅವುಗಳ ಹೆಸರುಗಳೇನು ?

ಆ) ಬೋರ್ಗಲ್, ಅಂಕಲಿ, ಸಿಡಿಲಗೊಂಡ, ರಾಶಿಂಗ್, ಮುಸರಗುಪ್ಪಿ ಈ ಕೆರೆಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

ಇ) ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುವ ಕೆರೆಗಳನ್ನು ಕಟ್ಟಲು ನಿರ್ಲಕ್ಷ್ಯವಾಗುತ್ತಿದ್ದು, ಕೆಲಸ ಪ್ರಾರಂಭ ಮಾಡುವಂತೆ ಸರ್ಕಾರದವರು ಆದೇಶ ನೀಡುವರೆ ?

ಈ) ಬೋಳಶಾನಹಟ್ಟಿ ಕೆರೆಯ ನಿರ್ಮಾಣದ ಬೇಡಿಕೆಗೆ ಜಿಲ್ಲಾ ಪರಿಷತ್ ಅಧಿಕಾರಿಗಳು ಗಮನ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ ಹಾಗೂ ನೀರಾವರಿ ಮಂತ್ರಿಗಳು).—

ಅ) ಈ ಕೆಳಕಂಡ ೧೯ ಕೆರೆಗಳು.

೧) ಬೈರಾಪುರ, ೨) ಉಳ್ಳಾಗಡ್ಡಿಖಾನಾಪುರ, ೩) ಶಿರಹಟ್ಟಿ, ೪) ಎಲಿಮನೋಲಿ, ೫) ಬೆಲ್ಲದ ಬಾಗೇವಾಡಿ, ೬) ಮೊಗಳಿ, ೭) ಕಣಗಲಿ, ೮) ಕರಜಗಿ ಇಂಗುಕೆರೆ, ೯) ಅವ್ಯಾಣಗಿ ನಾಲಾ, ೧೦) ಮರಡಿ ನಾಲಾ, (ಕಬ್ಬಾರಿನ ಹತ್ತಿರ), ೧೧) ಬೆಳ್ಳಿ, ೧೨) ರಾಶಿಂಗ್ ೧೩) ಮುಸರಗುಪ್ಪಿ, ೧೪) ಅಂಕಲಿ, ೧೫) ಬಡಾವಾಡಿ, ೧೬) ಹಾರಗಾಪುರ ಇಂಗುಕೆರೆ, ೧೭) ಬೊರಗಲ್, ೧೮) ನಿಡಸೋಷಿ, ೧೯) ಬಾಲೆನಾಲಾ.

ಆ) ಮುಸರಗುಪ್ಪಿ ಕೆರೆಯು ಮಂಜೂರಾತಿ ಹೊಂದಿದ್ದು ಕಾಮಗಾರಿಯನ್ನು ತೆಗೆದುಕೊಳ್ಳಲು ಟೆಂಡರ್ ಕರೆಯಲಾಗುತ್ತಿದೆ. ಬೋರ್ಗಲ್ ಮತ್ತು ರಾಶಿಂಗ್ ಕೆರೆಗಳು ಬೆಳಗಾವಿ ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಸೇರಿದ್ದು, ಕಾಮಗಾರಿಗಳನ್ನು ತೆಗೆದುಕೊಳ್ಳುವ ಆದ್ಯತೆಯ ಪಟ್ಟಿಯಲ್ಲಿ ಸೇರಿಸಿಲ್ಲವಾದುದರಿಂದ, ತೆಗೆದುಕೊಳ್ಳಲಾಗಿಲ್ಲ. ಅಂಕಲಿ ಮತ್ತು ಸಿಡಿಲಗೊಂಡ ಕೆರೆಗಳು ಜಿಲ್ಲಾ ಪರಿಷತ್ತಿನ ೧೯೮೭-೮೮ರ ಆಯವ್ಯಯದಲ್ಲಿ ಸೇರಿಲ್ಲ.

ಇ) ರಾಜ್ಯದ ಹಣಕಾಸಿನ ಪರಿಸ್ಥಿತಿಯಿಂದಾಗಿ, ಯಾವುದೇ ಹೊಸ ಕಾಮಗಾರಿಗಳನ್ನು ಪ್ರಾರಂಭಿಸಲಾಗಲಿಲ್ಲ. ಹಣಕಾಸಿನ ಪರಿಸ್ಥಿತಿಯನ್ನವಲಂಬಿಸಿ ಹೊಸ ಕಾಮಗಾರಿಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಈ) ಬೋಳಶಾನಹಟ್ಟಿ ಕೆರೆಯು ಆಯವ್ಯಯ ಪಟ್ಟಿಯಲ್ಲಿ ಸೇರಿಲ್ಲ.